











ನೀಲಕುರಿಂಜಿಯ ವೈಜ್ಞಾನಿಕ ಹೆಸರು Strobilanthes Kunthiana. ಭಾರತದಲ್ಲಿ ಈ ಸಸ್ಯದ ಕೆಲವು ಉಪಜಾತಿಗಳನ್ನು ನೋಡಬಹುದು. ದಕ್ಷಿಣ ಭಾರತದಲ್ಲಿ ನೀಲಿ ಮಿಶ್ರಿತ ನೇರಳೆ ಬಣ್ಣದ ಹೂ ಬಿಡುವ ಈ ಗಿಡಗಳನ್ನು ಪಶ್ಚಿಮಘಟ್ಟದ ಶೋಲಾ ಕಾಡಿನ ಸಾಲಿನಲ್ಲಿ ನೋಡಬಹುದು. ಇದು ಸುಮಾರು ಎರಡು ಎರಡೂವರೆ ಅಡಿ ಎತ್ತರದ ಕುರುಚಲು ಗಿಡ. ದೊಡ್ಡಪತ್ರೆ ಆಕಾರದ ಎಲೆ. ಇವಕ್ಕೆ ಎತ್ತರದ ಪರ್ವತ ಶ್ರೇಣಿಗಳೇ ಆಗಬೇಕು. ಅತಿ ಹೆಚ್ಚಿನ ಮಳೆ ಮತ್ತು ಮಂಜಿನ ವಾತಾವರಣದಲ್ಲಿ ನೀಲಕುರಿಂಜಿಗಳು ಒತ್ತಾಗಿ ಬೆಳೆಯುತ್ತವೆ.

ಈ ಬಾರಿ ನಮ್ಮ ಚಿಕ್ಕಮಗಳೂರಿನ ಪರ್ವತ ಶ್ರೇಣಿಗಳಲ್ಲಿ ಸಾಕಷ್ಟು ಹೂ ಅರಳಿ ನಿಂತಿವೆ. ಮಲ್ಲಂದೂರಿ ಬೆಟ್ಟಗುಡ್ಡಗಳು, ಚಂದ್ರದ್ರೋಣ ಪರ್ವತ ಶ್ರೇಣಿಗಳು ಬಹತೇಕ ನೀಲಮಿಶ್ರಿತ ನೇರಳೆ ಬಣ್ಣದಿಂದ ಕಂಗೊಳಿಸುತ್ತಿವೆ. ಈ ಸುದ್ದಿಯನ್ನು ಬೆನ್ನತ್ತಿ ಗೆಳೆಯರಾದ ವಿಶ್ವನಾಥ್ ಗೌಡ, ಅಶೋಕ್ ಮತ್ತು ಪವನ್ ಅವರೊಂದಿಗೆ ಚಿಕ್ಕಮಗಳೂರಿನ ದಾರಿ ಹಿಡಿದೆ.

ಮೊದಲು ಮಲ್ಲಂದೂರಿಗೆ ಹೋದೆವು. ಬೆಟ್ಟದ ಬುಡದಲ್ಲಿ ಕಾರು ನಿಲ್ಲಿಸಿ ಒಂದು ಕಿಲೋಮೀಟರ್ ಬೆಟ್ಟ ಹತ್ತಿದೆವು. ಬೆಟ್ಟದ ತುದಿ ತಲುಪಿದ ನಮಗೆ ಮತ್ತೆ ಆತಂಕ. ಬೆಟ್ಟದ ತುಂಬೆಲ್ಲಾ ನೀಲಕುರಿಂಜಿ ಗಿಡಗಳೇ ತುಂಬಿದ್ದರೂ ಹೂಗಳು ಮಾತ್ರ ಅಲ್ಲೊಂದು ಇಲ್ಲೊಂದು! ಮತ್ತೆ ನಿರಾಸೆ. ಶೇ.90ರಷ್ಟು ಹೂ ಖಾಲಿಯಾಗಿತ್ತು. ಅದೃಷ್ಟ ಇಷ್ಟೇ ಎಂದುಕೊಂಡು ಇದ್ದುದನ್ನೇ ಕ್ಲಿಕ್ಕಿಸಿದೆವು. ಮತ್ತೆ ಮಧ್ಯಾಹ್ನದ ಮೇಲೆ ನೀಲಕುರಿಂಜಿಗಾಗಿ ಹುಡುಕಾಟ ಪ್ರಾರಂಭಿಸಿದೆವು. ಎರಡು ಗಂಟೆಗಳ ಪ್ರಯಾಣದ ನಂತರ ಚಿಕ್ಕಮಗಳೂರು ದಾಟಿ ಬಾಬಾಬುಡನ್ ಗಿರಿ ಕಡೆಗೆ ಪ್ರಯಾಣ ಬೆಳೆಸಿದೆವು. ಜನವಸತಿ ಬಿಟ್ಟು ಬೆಟ್ಟಗಳು ಕಾಣುತ್ತಿದ್ದಂತೆಯೇ ಏನೋ ಉಲ್ಲಾಸ, ತವಕ. ದೂರಕ್ಕೆ ಕಣ್ಣಾಯಿಸಿದಾಗ ಬೆಟ್ಟಗಳ ಮೇಲೆ ನೇರಳೆ ಹೊದಿಕೆ! ಮನಸ್ಸು ರೆಕ್ಕೆ ಕಟ್ಟಿ ಬೆಟ್ಟವನ್ನೆಲ್ಲ ಸುತ್ತಾಡಿದ ಅನುಭವವಾಯಿತು. ಸ್ವಲ್ಪ ದೂರ ಕ್ರಮಿಸುತ್ತಿದ್ದಂತೆ ರಸ್ತೆಯ ಇಕ್ಕೆಲಗಳಲ್ಲೂ ನೀಲಕುರಿಂಜಿಯ ರತ್ನಗಂಬಳಿ. ಹೂವನ್ನು ನಿಧಾನವಾಗಿ ಸ್ಪರ್ಶಿಸಿ ಕಣ್ಣು–ಮನಸ್ಸು ತುಂಬಿಕೊಂಡೆ. ಬೆಟ್ಟಗಳಲ್ಲಿ ಸುತ್ತಾಡಿ ಬೇಕಾದ ಕೋನಗಳಿಂದ ಚಿತ್ರಗಳನ್ನು ಕ್ಲಿಕ್ಕಿಸಿಕೊಂಡೆ. ಆಗಾಗ ಬರುತ್ತಿದ್ದ ಮೋಡಗಳು ಹೂಗಳನ್ನು ಮುದ್ದಾಡಿ ಹೋಗುತ್ತಿದ್ದವು.

ಎರಡು ದಿನ ಬೆಟ್ಟಗಳನ್ನು ಸುತ್ತಾಡಿ ನೀಲಕುರಿಂಜಿಯ ಸಾವಿರಾರು ಫೋಟೊಗಳನ್ನು ಕ್ಲಿಕ್ಕಿಸಿದ್ದಾಯಿತು. ನನ್ನಂತೆ ನೂರಾರು ಛಾಯಗ್ರಾಹಕರು ಹೀಗೆಯೇ ಚಿತ್ರಗಳನ್ನು ತೆಗೆದಿರುತ್ತಾರೆ; ನನ್ನದೇನಿದೆ ವಿಶೇಷ ಎಂದು ಯೋಚಿಸಿದೆ. ಮತ್ತೊಂದು ದಿನ ಉಳಿದು ನೀಲಕುರಿಂಜಿಯ ಬಗ್ಗೆ ಒಂದಷ್ಟು ಅಧ್ಯಯನ ಮಾಡೋಣ ಅನಿಸಿತು. ಹತ್ತು–ಹದಿನೈದು ವರ್ಷಗಳ ನಂತರ ಈ ರೀತಿ ಪೂರ್ಣ ಪ್ರಮಾಣದಲ್ಲಿ ಬೆಟ್ಟ ಬೆಟ್ಟವೇ ಹೂಮಯವಾಗಿದೆ. ಪ್ರತಿಯೊಬ್ಬ ಛಾಯಚಿತ್ರಗಾರನೂ ಮೋಹಕ ಹೂರಾಶಿಯ ಫೋಟೊ ತೆಗೆಯುವುದು ಸಹಜ.

ಹನ್ನೆರಡು ವರ್ಷಗಳ ಅಂತರದಲ್ಲಿ ಅರಳುವ ಈ ಹೂಗಳ ಪರಿಚಯ ಎಷ್ಟು ಕ್ರಿಮಿ ಕೀಟಗಳಿಗಿದೆ? ಈ ಹೂಗಳು ಯಾವ ರೀತಿಯ ಕ್ರಿಮಿಕೀಟಗಳನ್ನು ಆಕರ್ಷಿಸುತ್ತವೆ? ಎನ್ನುವ ಪ್ರಶ್ನೆಗಳು ಮೂಡಿದವು. ಇಡೀ ದಿನ ನೀಲಕುರಿಂಜಿಗಳ ಬುಡದಲ್ಲೇ ಕುಳಿತು, ಮ್ಯಾಕ್ರೊ ಲೆನ್ಸ್ ಬಳಸಿ ಅನೇಕ ಕೀಟಗಳನ್ನು ಹೂಗಳ ಜೊತೆಯಲ್ಲಿ ಸೆರೆಹಿಡಿದೆವು. ಹೂವಿನ ಮಕರಂದ ಹೀರಲು ಬರುವ ದುಂಬಿಗಳು, ಕೀಟಗಳು, ಜೇನ್ನೊಣಗಳು ಮತ್ತು ಈ ಕೀಟ– ದುಂಬಿಗಳನ್ನು ಬೇಟೆಯಾಡಲೆಂದೇ ಹೂವಿನಲ್ಲಿ ಅಡಗಿ ಕುಳಿತ ಜೇಡಗಳನ್ನು ದಾಖಲಿಸಿದೆವು.

ಪ್ರತಿಕ್ರಿಯಿಸಿ: **feedback@sudha.co.in**